# FEBRUARY 02, 2026
# AKASHAVANI - DHARWAD
# PRADESH SAAMACHARA (KANNADA) 12 PM

<><><>

**ಜಾತಿ ಗಣತಿ ವರದಿ,** ಇನ್ನೊಂದು ತಿಂಗಳಲ್ಲಿ ಸಲ್ಲಿಕೆಯಾಗಲಿದ್ದು ಸೂಕ್ತ ಚರ್ಚೆಯ ಬಳಿಕ ಅಂಗೀಕರಿಸಿ ಜಾರಿಗೊಳಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ದೇವದುರ್ಗದ, ಶ್ರೀ ಕಾಗಿನೆಲೆ ಮಹಾ ಸಂಸ್ಥಾನ, ಕನಕ ಗುರುಪೀಠ, ತಿಂಥಣಿ ಬ್ರಿಡ್ಜ್ ವತಿಯಿಂದ ಆಯೋಜಿಸಲಾಗಿದ್ದ ಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿಯವರ ನುಡಿನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಬುದ್ಧ, ಬಸವಾದಿ ಶರಣರು, ಜಾತಿ ವ್ಯವಸ್ಥೆಯನ್ನು ವಿರೋಧಿಸಿದ್ದಾರೆ. ಮನುಜರೆಲ್ಲರೂ ಒಂದೇ ಕುಟುಂಬ ಎಂದು ಭಾವಿಸಬೇಕು. ಸಮಾನ ಅವಕಾಶಗಳಿರುವ, ಸಮಸಮಾಜವನ್ನು ನಿರ್ಮಿಸುವುದು ತಮ್ಮ ಆದ್ಯತೆ ಎಂದರು.

<><><>

**'ತರೀಭೂಮಿಗಳ ಉಳಿವು ಹಾಗೂ ಸಂರಕ್ಷಣೆ; ನಮ್ಮ ಭವಿ ್ಯದ ರಕ್ಷಣೆ'** ಎಂಬ ಧ್ಯೇಯದೊಂದಿಗೆ ಇಂದು ವಿಶ್ವ ತರೀಭೂಮಿ ದಿನಾಚರಣೆ. ಅಸಂಖ್ಯ ಜೀವಗಳನ್ನು ಪೋಷಿಸುವ, ಜೌಗು ಪ್ರದೇಶಗಳ,ರಾಮಸ್ಸಾರ್ ಮನ್ನಣೆಯ, ಹಕ್ಕಿ ಇರುನೆಲೆ, ಪಕ್ಷಿ ಆವಾಸ ಸ್ಥಾನಗಳ ಬಗ್ಗೆ ಶ್ರೀ ಸಾಮಾನ್ಯರಿಗೆ ಅರಿವು ಮೂಡಿಸುವ ದಿನವಾಗಿ, ಆಚರಿಸಲ್ಪಡುತ್ತದೆ. ಜೌಗು ಪ್ರದೇಶಗಳು, ನೈಸರ್ಗಿಕ ನೀರಿನಾಸರೆಗಳಾಗಿದ್ದು, ಮಳೆ ನೀರನ್ನು ಶುದ್ಧೀಕರಿಸುವ, ಜೀವವೈವಿಧ್ಯತೆಯನ್ನು ರಕ್ಷಿಸುವ, ಹವಾಮಾನ ಬದಲಾವಣೆಯ ವಿರುದ್ಧ ಮೌನವಾಗಿ ಹೋರಾಡುವ ನಿಸರ್ಗ ಯೋಧರಂತೆ ಕೆಲಸ ಮಾಡುತ್ತವೆ. ವಲಸೆ ಹಕ್ಕಿಗಳ ಬದುಕು ತರೀಭೂಮಿಯೊಂದಿಗೆ ಬೆಸೆದುಕೊಂಡಿದ್ದು ವಲಸೆ ಹಕ್ಕಿಗಳ ವೀಕ್ಷಣೆ, ಸಮೀಕ್ಷೆ ಮತ್ತು ಗಣತಿಯೊಂದಿಗೆ ದಾಖಲೀಕರಣ, ಈ ತಿಂಗಳ 13 ರಿಂದ 16ರ ವರೆಗೆ ದೇಶಾದ್ಯಂತ ಎಲ್ಲ ನೀರಿನಾಸರೆಗಳಲ್ಲಿ ಜನವಿಜ್ಞಾನಿಗಳ ಸಹಭಾಗಿತ್ವದಲ್ಲಿ ನಡೆಯಲಿದೆ.

<><><>

**ಮಂಗನ ಕಾಯಿಲೆಗೆ ಸದ್ಯಕ್ಕೆ ನಿಗದಿತವಾದ** ಚಿಕಿತ್ಸೆ ಲಭ್ಯವಿಲ್ಲದ ಕಾರಣ, ಪರಿಣಾಮಕಾರಿ ಔಷಧಿಗಾಗಿ ಕ್ಲಿನಿಕಲ್ ಟ್ರಯಲ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ್ ಹೇಳಿದ್ದಾರೆ. ಶಿವಮೊಗ್ಗದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ನಡೆಸಿದ ಮಹತ್ವದ ಸಭೆಯಲ್ಲಿ ಚರ್ಚಿಸಲಾದ ಮಂಗನಕಾಯಿಲೆ ನಿಯಂತ್ರಣದ ಕುರಿತು ಸಾಮಾಜಿಕ ಮಾಧ್ಯಮದ ಮೂಲಕ ಮಾಹಿತಿ ಹಂಚಿಕೊಂಡಿದ್ದಾರೆ. ತಜ್ಞರು ಅಧಿಕೃತವಾಗಿ ಔಷಧಿಯನ್ನು ದೃಢೀಕರಿಸಿದ ಕೂಡಲೇ ಅದನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲು ಸರ್ಕಾರ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಿದೆ. ಅಲ್ಲಿಯವರೆಗೂ ಮುನ್ನೆಚ್ಚರಿಕೆ ವಹಿಸಬೇಕು ಎಂದರು. ವಿಶೇಷವಾಗಿ ಶಿವಮೊಗ್ಗ, ಮಂಗಳೂರು ಹಾಗೂ ಉಡುಪಿಯಂತಹ ಅರಣ್ಯ ಪ್ರದೇಶ ಹೆಚ್ಚಿರುವ ಜಿಲ್ಲೆಗಳ ಸಾರ್ವಜನಿಕರು ಜ್ವರ ಅಥವಾ ತಲೆಭಾರದಂತಹ ಲಕ್ಷಣಗಳು ಕಂಡುಬಂದಲ್ಲಿ ನಿರ್ಲಕ್ಷ್ಯವಹಿಸದೆ ಕೂಡಲೇ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಉಚಿತ ಚಿಕಿತ್ಸೆ ಪಡೆದುಕೊಳ್ಳಬೇಕು ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಜನರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ವ್ಯಾಪಕವಾಗಿ ಕಾರ್ಯನಿರ್ವಹಿಸುವಂತೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಆರೋಗ್ಯ ಇಲಾಖೆಯ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಮಂಗನಕಾಯಿಲೆ ಮುಕ್ತ ಸಮಾಜ ನಿರ್ಮಾಣಕ್ಕೆ ತಮ್ಮೊಂದಿಗೆ ಕೈಜೋಡಿಸುವಂತೆ ಸಚಿವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

<><><>

**ಚಿಕ್ಕಮಗಳೂರು ಜಿಲ್ಲೆಯಾದ್ಯಂತ,** ಕ್ಯಾಸನೂರು ಮಂಗನ ಕಾಯಿಲೆ, – ಕೆ.ಎಫ್.ಡಿ. ರೋಗ, ಸಾಂಕ್ರಾಮಿಕವಾಗಿ ಹರಡದಂತೆ, ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ, ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಒಟ್ಟು, 9 ಕೆ.ಎಫ್.ಡಿ. ಮಂಗನಕಾಯಿಲೆ ಪ್ರಕರಣಗಳು ಪತ್ತೆಯಾಗಿದ್ದು, 6 ಜನ, ಚಿಕಿತ್ಸೆ ಪಡೆದು, ಗುಣಮುಖರಾಗಿದ್ದಾರೆ. 550ಕ್ಕೂ ಹೆಚ್ಚು ಜನರನ್ನು,

ಕೆ.ಎಫ್.ಡಿ. ಸೋಂಕು ಪತ್ತೆ ಪರೀಕ್ಷೆಗೆ, ಒಳಪಡಿಸಲಾಗಿದೆ. ಕೊಪ್ಪ ಪಟ್ಟಣದ, ಸರ್ಕಾರಿ ಆಸ್ಪತ್ರೆಯಲ್ಲಿ, ಕೆ.ಎಫ್.ಡಿ. ಸೋಂಕು ಚಿಕಿತ್ಸೆಗೆ ವಿಶೇಷ ವಾರ್ಡ್ ತೆರೆದು ಆರೈಕೆಗೆ ವ್ಯವಸ್ಥೆ ಮಾಡಲಾಗಿದೆ.

**<><><>**

**ಭಾರತೀಯ ಸಂಸ್ಕೃತಿ,** ಎಲ್ಲವನ್ನೂ ಒಳಗೊಳ್ಳುವ ಗುಣ ಹೊಂದಿದೆ. ಈ ಸಾಮರಸ್ಯದ ಸಂದೇಶ ವಿದ್ಯಾರ್ಥಿಗಳಲ್ಲಿ ಬಿತ್ತಬೇಕು. ಸತ್ಯದ ಅರಿವಿನಲ್ಲಿ ಮತ್ತು ಇತಿಹಾಸದ ಬೆಳಕಿನಲ್ಲಿ, ಭಾರತವನ್ನು ಪ್ರಾಧ್ಯಾಪಕರು ಮುನ್ನಡೆಸಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರ ಕಾರ್ಯವಾಹ, ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ. ಧಾರವಾಡದ ಸತ್ತೂರಿನ, ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ, ಕರ್ನಾಟಕ ಉತ್ತರ ಪ್ರಾಂತದಿಂದ ಆಯೋಜಿಸಿದ್ದ ಪ್ರಾಧ್ಯಾಪಕರ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

**<><><>**

**ಜೋಗತಿ ನೃತ್ಯ ಎಂಬ, ಜಾನಪದ ಕಲೆ ಮೂಲಕ** ಲಿಂಗ ತಾರತಮ್ಯದ ಭಾವನೆ ತೊಡೆದು ಹಾಕಲು ಪ್ರಯತ್ನಿಸಿ ನಾಡಿನ ಗೌರವಕ್ಕೆ ಭಾಜನರಾಗಿದ್ದಾಗಿ ಪದ್ಮಶ್ರೀ ಬಿ. ಮಂಜಮ್ಮ ಜೋಗತಿ ಹೇಳಿದ್ದಾರೆ. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಸುವರ್ಣ ಮಹೋತ್ಸವ ಸಭಾಂಗಣದಲ್ಲಿ, ಅಂತರ್ ವಲಯ ಯುವ ಜನೋತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ವಿಶ್ವವಿದ್ಯಾಲಯದ ಉಪ ಕುಲಪತಿ ಎ.ಎಮ್. ಖಾನ್ ಅಧ್ಯಕ್ಷತೆ ವಹಿಸಿದ್ದರು. ಜೆ.ಎಸ್.ಎಸ್. ಬನಶಂಕರಿ ಕಲಾ, ವಾಣಿಜ್ಯ ಹಾಗೂ ಶಾಂತಿಕುಮಾರ ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ, ಸಮಗ್ರ ವಿರಾಗ್ರಣಿ, ರಂಗದಿಪ್ತಿ ಪ್ರಶಸ್ತಿಗೆ ಭಾಜನವಾಯಿತು.

**<><><>**

**ನ್ಯಾಯಾಲಯಗಳಿಗೆ, ಆಧುನಿಕ ಮೂಲಸೌಕರ್ಯ** ಮತ್ತು ಮೌಲ್ಯವರ್ಧಿತ ತಂತ್ರಜ್ಞಾನ, ಕಕ್ಷಿದಾರರಿಗೆ ತ್ವರಿತವಾಗಿ ನ್ಯಾಯ ಒದಗಿಸಲು, ಪೂರಕ ಎಂದು, ಆಂಧ್ರ ಪ್ರದೇಶದ ರಾಜ್ಯಪಾಲ, ನ್ಯಾಯಮೂರ್ತಿ ಅಬ್ದುಲ್ ನಝೀರ್, ಹೇಳಿದ್ದಾರೆ. ದಕ್ಷಿಣಕನ್ನಡ ಜಿಲ್ಲೆ, ಪುತ್ತೂರಿನ ನೂತನ ನ್ಯಾಯಾಲಯ ಸಂಕೀರ್ಣ ಉದ್ಘಾಟಿಸಿ, ಅವರು ಮಾತನಾಡಿದರು. ಭಾರತದ ಸಂವಿಧಾನ ರಚನೆಯ ಸಂದರ್ಭದಲ್ಲಿ, ದಕ್ಷಿಣಕನ್ನಡ ಜಿಲ್ಲೆಯ ಬೆನಗಲ್ ನರಸಿಂಹರಾವ್ ಅವರು, ಮಹತ್ತರ ಪಾತ್ರ ನಿರ್ವಹಿಸಿದ್ದಾರೆ. ಸಂವಿಧಾನ ಶಿಲ್ಪಿ ಬಾಬಾಸಾಹೇಬ ಅಂಬೇಡ್ಕರ್ ಅವರು, ಬೆನಗಲ್ ಅವರ ಶ್ರಮವನ್ನು ಶ್ಲಾಘಿಸಿದ್ದಾರೆ ಎಂದರು.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ.**

**<><><>**